ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಂಘನಾಥ ರಾವ್, ಮಲ್ಕಾಪೂರೆ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1885ಕ್ಕೆ ಉತ್ತರ

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರು ಮಾಡಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿವಿಧ ಸಮುದಾಯಗಳ ಆಭಿವೃದ್ಧಿ ಕಾರ್ಯಕ್ರಮದಡಿ ಬೀದರ್ ಜಿಲ್ಲೆಯ ಎಲ್ಲಾ ವಿಧಾನ ಸಭಾಕ್ಷೇತ್ರಗಳ 8 ಸಂಘ/ಸಂಸ್ಥೆಗಳಿಗೆ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಅನುದಾನವನ್ನು ಮಂಜೂರು ಮಾಡಲಾಗಿದೆ.<br>ಬೀದರ್ ಜಿಲ್ಲೆಗೆ ಮಂಜೂರು ಮಾಡಿರುವ ಸಮುದಾಯ ಭವನಗಗಳ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಪೂರ್ಣಗೊಂಡು ಬಳಕೆಯಾಗುತ್ತಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು; ಪ್ರಾರಂಭವಾಗದೆ ಇರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು, ವಿಳಂಬಕ್ಕೆ ಕಾರಣಗಳೇನು; | ಬೀದರ್ ಜಿಲ್ಲೆಗೆ ಮಂಜೂರು ಮಾಡಿರುವ 8 ಸಮುದಾಯ ಭವನಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಈ ಪೈಕಿ 6 ಸಂಘ/ಸಂಸ್ಥೆಗಳ ಸಮುದಾಯಭವನ ಕಟ್ಟಡಗಳ ಕಾಮಗಾರಿ ಪ್ರಾರಂಭಿಸಿದ್ದು, ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿ ಇರುತ್ತದೆ. ಇನ್ನೂ 2 ಸಂಘ/ಸಂಸ್ಥೆಗಳು ಸಮುದಾಯ ಭವನ ಕಟ್ಟಡಗಳ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.<br>ಸರ್ಕಾರದ ಮಾರ್ಗಸೂಚಿಗಳನ್ವಯ ಸಂಘ/ಸಂಸ್ಥೆಗಳು ದಾಖಲೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದೇ ಇರುವ ಕಾರಣ ಸಮುದಾಯ ಭವನ ಕಟ್ಟಡಗಳ ಕಾಮಗಾರಿಯನ್ನು ಪ್ರಾರಂಭಿಸಿಲು ಅನುದಾನವನ್ನು ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವುದಿಲ್ಲ. |
| ಇ) | ಈ ಭವನಗಳಿಗೆ ಕಳದೆ 3 ವರ್ಷಗಳಲ್ಲಿ ಎಷ್ಟು ಹಣ ಮಂಜೂರು ಮಾಡಲಾಗಿದೆ. (ಸಂಪೂರ್ಣ ವಿವರ ನೀಡುವುದು) | ಸದರಿ ಸಮುದಾಯ ಭವನಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಿರುವ ಅನುದಾನದ ವಿವರ ಈ ಕೆಳಕಂಡತಿದೆ. (ಕೋಷ್ಟಕ ಕೆಳಗಿದೆ)<br>ಸಂಘ-ಸಂಸ್ಥೆಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಈ) | ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ವಿವರಗಳ ಮಾಹಿತಿ ಒದಗಿಸುವುದು? | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ. |

| ಕ್ರ.ಸ | ವರ್ಷ | ಮಂಜೂರಾತಿ ಮೊತ್ತ (ರೂಲಕ್ಷಗಳಲ್ಲಿ) | ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2013-14 | 10.00 | 10.00 |
| 2 | 2014-15 | 60.00 | 15.00 |
| 3 | 2015-16 | 0.00 | 0.00 |
| | ಒಟ್ಟು | 70.00 | 25.00 |

ಆಯುಕ್ತರ ಪರವಾಗಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

D:\d drive 2016\17\...\Q1885.docx